ಸೌರಶಕ್ತಿ ವಿದ್ಯುತ್ ಉತ್ಪಾದನೆಯ ಮಾಹಿತಿ

689(742); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಸರ್ಕಾರವು ರೂಪಿಸಿರುವ ಯೋಜನೆಗಳಾವುವು (ಮಾಹಿತಿ ಒದಗಿಸುವುದು);

ಆ) ಈ ಯೋಜನೆಗೆ ಫಲಾನುಭವಿಗಳಾಗಲು ಸರ್ಕಾರವು ನೀಡುತ್ತಿರುವ ಸೌಲಭ್ಯ ಹಾಗೂ ಸಬ್ಸಿಡಿಗಳ ವಿವರ ನೀಡುವುದು;

ಇ) ಸದರಿ ಯೋಜನೆಗೆ ತಹಲ್‌ವರೆಗೂ ಅರ್ಜಿ ಸಲ್ಲಿಸಿರುವ ಜಿಲ್ಲಾವಾರು ಮಾಹಿತಿ ನೀಡುವುದು

ಈ) ಸದರಿ ಯೋಜನೆಗೆ ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಸೌರ ನೀತಿ 2014–21ರನ್ವಯ ಸೋಲಾರ್ ವಿದ್ಯುತ್ ಬಳಕೆಯನ್ನು ಹೆಚ್ಚಿಸಲು ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಲಾಗಿದೆ:

- ದೊಡ್ಡ ಪ್ರಮಾಣದ ಗ್ರಿಡ್ ಸಂಪರ್ಕಿತ ಸೋಲಾರ್ ಫೋಟೋ ವೋಲ್ಟಾಯಿಕ್ (PV) ಮತ್ತು ಕೇಂದ್ರೀಕೃತ ಸೋಲಾರ್ ಪವರ್ ಯೋಜನೆಗಳಡಿಯಲ್ಲಿ (CSP) ಸ್ವಯಂ ಬಳಕೆ/ಸಮೂಹ ಸ್ವಯಂ ಬಳಕೆಗಾಗಿ ಸಾರ್ವಜನಿಕರು ಘಟಕಗಳನ್ನು ಸ್ಥಾಪಿಸಬಹುದಾಗಿದೆ.
- ಸ್ವತಂತ್ರ ವಿದ್ಯುತ್ ಉತ್ಪಾದಕರ ವರ್ಗದಡಿ ಸೌರ ಘಟಕಗಳನ್ನು ಸ್ಥಾಪಿಸಬಹುದಾಗಿದ್ದು, ಸ್ಥಾಪಿತ ಸಾಮರ್ಥ್ಯದಿಂದ ಉತ್ಪನ್ನವಾದ

ಸೌರ ವಿದ್ಯುತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

- ಮನೆಗಳ ಛಾವಣಿ ಮೇಲೆ ಸೌರ ಪಿ.ವಿ ಘಟಕಗಳನ್ನು ಅಳವಡಿಸಿಕೊಳ್ಳಲು ಗ್ರಿಡ್ ಸಂಪರ್ಕಿತ ಸೌರ ಮೇಲ್ಛಾವಣಿ ಯೋಜನೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಅಲ್ಲದೇ ರೈತರಿಗಾಗಿ "ಸೂರ್ಯ ರೈತ" ಎಂಬ ಯೋಜನೆಯನ್ನು ಹೊರಡಿಸಲಾಗಿರುತ್ತದೆ. ಈ ಯೋಜನೆಯನ್ನು ನೀರಾವರಿ ಪಂಪ್‌ಸೆಟ್‌ಗೆ ಮೀಸಲಾಗಿರುವ ಫೀಡರ್‌ಗಳಲ್ಲಿನ ಪಂಪ್‌ಸೆಟ್‌ಗಳಿಗೆ ರೂಪಿಸಲಾಗಿದೆ. ಇದು 10 ಹೆಚ್.ಪಿ. ಸಾಮರ್ಥ್ಯದವರೆಗಿನ ನೀರಾವರಿ ಪಂಪ್‌ಸೆಟ್‌ಗೆ ಅನ್ವಯಿಸುತ್ತದೆ. ಉತ್ಪಾದಿತ ವಿದ್ಯುತ್‌ನಲ್ಲಿ ಸ್ವಂತ ಬಳಕೆಗೆ ಉಪಯೋಗಿಸಿ ಉಳಿದ ವಿದ್ಯುತ್‌ನ್ನು ಗ್ರಿಡ್‌ಗೆ ನೀಡಿದ್ದಲ್ಲಿ ಕೆ.ಇ.ಆರ್.ಸಿ ರವರು ನೆಟ್ ಮೀಟರಿಂಗ್ ವ್ಯವಸ್ಥೆಯಡಿ Rooftop and Small Solar PV Plants ಗೆ ನಿಗದಿಪಡಿಸಿರುವ ದರದಂತೆ ಹಣ ಪಾವತಿಸಲಾಗುವುದು.

ಆ) ಸೌರ ವಿದ್ಯುತ್ ಉತ್ಪಾದಿಸುವ ಖಾಸಗಿಯವರಿಗೆ

1. ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಭೂ ಸುಧಾರಣೆ ಕಾಯ್ದೆ 109 ರನ್ವಯ ಭೂಮಿಗೆ ಭೂಮಿಗೆ ಡೀಮ್ಡ್ ಕನ್‌ವರ್ಷನ್ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಿದೆ.

2. ಕೇಂದ್ರ ಸರ್ಕಾರದ excise ಸುಂಕ ಮತ್ತು customs ಸುಂಕ ವಿನಾಯಿತಿ ಲಭ್ಯವಿದೆ.

ಕರ್ನಾಟಕ ಕೈಗಾರಿಕಾ ನೀತಿಯಲ್ಲಿ ಲಭ್ಯವಿರುವ ವಿನಾಯಿತಿಗಳನ್ನು ಅಭಿವೃದ್ಧಿದಾರರು ಪಡೆಯಲು ಅವಕಾಶವಿದೆ.

ಇ) ಸೌರ ಶಕ್ತಿ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಇದುವರೆಗೂ ಅರ್ಜಿ ಸಲ್ಲಿಸಿರುವ ವಿದ್ಯುತ್ ವಿತರಣಾ ಕಂಪನಿವಾರು ಮಾಹಿತಿ ಕೆಳಕಂಡಂತಿದೆ:

ಕ್ರ.ಸಂ.	ವಿದ್ಯುತ್ ಸರಬರಾಜು ಕಂಪನಿ	ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ
1	ಬೆ.ವಿ.ಕಂ	338
2	ಮ.ವಿ.ಕಂ	07
3	ಚಾ.ವಿ.ಸ.ನಿ.ನಿ	06
4	ಹು.ವಿ.ಕಂ	04
5	ಗು.ವಿ.ಕಂ	32

ಈ) ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಇರಬೇಕಾದ ಅರ್ಹತೆಗಳು ಮಾನದಂಡಗಳ ಮುಖ್ಯಾಂಶಗಳು ಕೆಳಕಂಡಂತಿವೆ:

1. ಅರ್ಜಿದಾರರು ಆಯಾಯ ವಿದ್ಯುತ್ ಸರಬರಾಜು ಕಂಪನಿಗಳ ಗ್ರಾಹಕರಾಗಿರಬೇಕು.
2. ಎಲ್ಲಾ ವಸತಿ/ವಾಣಿಜ್ಯ/ಶಿಕ್ಷಣ/ಕೈಗಾರಿಕಾ ಸಂಸ್ಥೆಗಳು ಅರ್ಹರಾಗಿರುತ್ತಾರೆ.
3. ಅರ್ಜಿಗಳನ್ನು 1 ಮೆಗಾ ವ್ಯಾಟ್ ಸಾಮರ್ಥ್ಯದವರೆಗೂ ಸಲ್ಲಿಸಬಹುದಾಗಿದೆ.
4. ಅರ್ಜಿದಾರರು ಸೌರಶಕ್ತಿ ಮೇಲ್ಛಾವಣಿ ಪಿ.ವಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸದರಿ ವ್ಯವಸ್ಥೆಯ ವಿನ್ಯಾಸ, ಸರಬರಾಜು ಹಾಗೂ ಸ್ಥಾಪನೆಗೊಳಿಸುವ ಅನುಭವವಿರುವ ಪ್ರಸಿದ್ಧ ಅಳವಡಿಕೆದಾರರನ್ನು ಆಯ್ಕೆ ಮಾಡತಕ್ಕದ್ದು.

5. ವಿದ್ಯುತ್ ಸರಬರಾಜು ಕಂಪನಿಗಳಿಂದ ಅನುಮೋದಿತ ತಯಾರಕರ ಇನ್‌ವರ್ಟರ್‌ಗಳನ್ನು ಉಪಯೋಗಿಸತಕ್ಕದ್ದು.

6. ಗ್ರಾಹಕರು ಸಹಾಯಧನ ಸೌಲಭ್ಯವನ್ನು ಪಡೆದುಕೊಂಡಿರದಿದ್ದಲ್ಲಿ, ಎಂ.ಎನ್.ಆರ್.ಇ ಯಿಂದ ಸೌಲಭ್ಯವನ್ನು ಪಡೆದುಕೊಂಡಿರದ ಬಗ್ಗೆ ಸ್ವಘೋಷಿತ ದೃಢೀಕರಣವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

ಮೇಲ್ಛಾವಣಿ ಸ್ಥಾವರಗಳಿಂದ ಉತ್ಪಾದಿಸಲಾದ, ಹೆಚ್ಚುವರಿ ವಿದ್ಯುತ್ತನ್ನು ರವಾನೆ ಮಾಡುವುದರ ವಿದ್ಯುತ್ ದರವು ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ನಿರ್ಧರಿಸುವ ಚಾಲ್ತಿ ವಿದ್ಯುತ್ ದರಗಳ ಪ್ರಕಾರವಿರುತ್ತದೆ.

ಸರ್ಕಾರಿ ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳ ವಿವರ

690(743); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳೆಷ್ಟು (ಸಂಪೂರ್ಣ ಮಾಹಿತಿ ನೀಡುವುದು);

ಆ) ಸದರಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರವು ನೀಡಿರುವ ಸೌಲಭ್ಯ ಹಾಗೂ ವಿನಾಯಿತಿಗಳ ಮಾಹಿತಿ ನೀಡುವುದು;

ಇ) ಸದರಿ ಸಕ್ಕರೆ ಕಾರ್ಖಾನೆಗಳಿಂದ ಪ್ರಯೋಜನೆಯಾಗಿರುವ ಜಿಲ್ಲೆಗಳಾವುವು (ಪ್ರತ್ಯೇಕವಾಗಿ ವಿವರ ಒದಗಿಸುವುದು)

ಈ) ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ;

ಉ) ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಖಾಸಗಿ ವ್ಯಕ್ತಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆಯೇ (ಮಾಹಿತಿ ನೀಡುವುದು)?